ಅಸಲು ದಾವೆ ಸಂಖ್ಯೆ -283/2014
ಪಿ.ಡಬ್ಲ್ಯು - 01
ದಿನಾಂಕಃ 17-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಮ್ ಎಸ್ ಎಮ್ ವಕೀಲರಿಂದ</u>

ಮೂಲ ಪುರಷ ನಿಂಗಪ್ಪ ಹಾವಣಗಿ ರವರಿಗೆ ಎಷ್ಟು ಜನ ಮಕ್ಕಳು ಎಂದರೆ 6 ಜನ ಮಕ್ಕಳು. ಅವರ ಮಕ್ಕಳು ಹೆಸರು 1.ಪುಟ್ಟವ್ವ, 2. ಮುರಿಗೆಪ್ಪ, 3. ಫಕ್ಕೀರಪ್ಪ, 4. ಪಂಚಪ್ಪ, 5. ಚನ್ನಬಸಪ್ಪ, 6. ತೋಟಪ್ಪ. ಚನ್ನಬಸಪ್ಪ ಎಂದರೆ ನಿಮ್ಮ ತಂದೆಯವರು ಇರುತ್ತಾರೆ ಎಂದರೆ ಸರಿ. ನಿಮ್ಮ ತಾಯಿಯ ಹೆಸರು ಏನು ಎಂದರೆ ಕಾಶಮ್ಮ. ಚನ್ನಬಸಪ್ಪ ಮತ್ತು ಕಾಶಮ್ಮ ರವರಿಗೆ ಎಷ್ಟು ಜನ ಮಕ್ಕಳು ಎಂದರೆ 5 ಜನ ಮಕ್ಕಳು. 1. ನಾನು, 2. ಸಿದ್ದಲಿಂಗಪ್ಪ, 3. ಚಂದ್ರಮ್ಮ, 4. ಲೀಲಾವತಿ, 5. ಸುಜಾತಾ. ಸಿದ್ದಲಿಂಗಪ್ಪ ರವರು ಯಾವ ದಿನಾಂಕದಂದು ಮರಣ ಹೊಂದಿರುತ್ತಾರೆ ಎಂದರೆ 2010 ರಲ್ಲಿ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯ ಎದರು ಅಪಘಾತದಲ್ಲಿ ಮರಣ ಹೊಂದಿರುತ್ತಾರೆ. ನಿಂಗಪ್ಪ ಹಾವಣಗಿ ರವರು ಸಾಯುವ ಪೂರ್ವದಲ್ಲಿ ವರದಿ ಮುಖಾಂತರ ಅವರ ಗಂಡು ಮಕ್ಕಳಿಗೆ ಆಸ್ತಿಯನ್ನು ಹಂಚಿದ್ದಾರೆ ಎಂದರೆ ಸರಿ. ಚನ್ನಬಸಪ್ಪನಿಗೆ 24 ಎಕರೆ ಜಮೀನು, ಎರಡು ಅಂಗಡಿ ಮತ್ತು ಒಂದು ಮನೆ ಬಂದಿರುತ್ತದೆ ಎಂದರೆ ಸರಿ. 24 ಎಕರೆ ಜಮೀನಿನ ಸರ್ವೆ ನಂಬರ ಎಷ್ಟು ಎಂದರೆ ಸರ್ವೆ ನಂ. 23,24,25 ರಲ್ಲಿ ಬಂದಿರುತ್ತದೆ. ಈ ಎಲ್ಲಾ ಸರ್ವೆ ನಂಬರಗಳು ಸವಣೂರ ಹದ್ದಿನ ಜಮೀನುಗಳು ಎಂದರೆ ಸರಿ. ಈ ಸರ್ವೆ ನಂಬರಗಳ ಅ ಖಾತೆ ಉತಾರವನ್ನು ಪ್ರತಿ ವರ್ಷ ನೀವು ತೆಗೆದುಕೊಳ್ಳುತ್ತಿದ್ದೀರಿ ಎಂದರೆ ಸರಿ. ಅ ಉತಾರಗಳಲ್ಲಿ ನಿಮ್ಮ ತಂದೆಯ ಹೆಸರು ನಮೂದು ಆಗುತ್ತಿತ್ತು ಎಂದರೆ ಸರಿ. ನಿಮ್ಮ ತಂದೆಯವರು ಯಾವಾಗ ತೀರಿಕೊಂಡರು ಎಂದರೆ 2014 ರಲ್ಲಿ ತೀರಿಕೊಂಡರು. 2014 ರ ಮೊದಲು ಸದರಿ ಜಮೀನುಗಳನ್ನು ಯಾರು ನೋಡಿಕೊಳ್ಳುತ್ತಿದ್ದರು ಎಂದರೆ ನಮ್ಮ ತಂದೆಯವರು ನೋಡಿ ಕೊಳ್ಳುತ್ತಿದ್ದರು. ಸರ್ವೆ ನಂ. 23,24,25 ರಲ್ಲಿ ಯಾರು ಸಾಲ ಪಡೆದಿರುತ್ತಾರೆ ಎಂದರೆ ನಮ್ಮ ತಂದೆಯವರು ಅರಬನ್ ಬ್ಯಾಂಕನಲ್ಲಿ ಪಡೆದಿರುತ್ತಾರೆ. ಈ ಆಸ್ತಿಗಳಲ್ಲಿ ಯಾರು ಯಾರು ವ್ಯವಸಾಯ ಏತರ ಜಮೀನನ್ನು ಭೂ ಪರಿವರ್ತನೆ ಮಾಡಿಕೊಂಡರು ಎಂದರ ಸಿದ್ದಲಿಂಗಪ್ಪನ್ನು ಸರ್ವೆ ನಂ. 23 ರಲ್ಲಿ ಮಾಡಿಕೊಂಡಿರುತ್ತಾನೆ. ಸರ್ವೆ ನಂ. 23 ಸದರಿ ಸಿದ್ದಲಿಂಗಪ್ಪನಿಗೆ ಹೇಗೆ ಬಂದಿತು ಎಂದರೆ ನಮ್ಮ ತಂದೆಯಮರ ಜೀವಂತ ಇದ್ದಾಗ ಅಪಸಾತ್ ವಾಟ್ನಿ ಮಾಡಿದ್ದರು ಅದರ ಮುಖಾಂತರ ಬಂದಿರುತ್ತದೆ. ಹಾಗಾದರೆ ಸದರಿ

ಅಪಸಾತ್ ವಾಟ್ನಿ ಯಲ್ಲಿ ನಿಮಗೆ ಯಾವ ಆಸ್ತಿ ಬಂದಿತು ಎಂದರೆ ಸರ್ವೆ ನಂ. 24 ಬಂದಿರುತ್ತದೆ. ಹಾಗಾದರೆ ಸರ್ವೆ ನಂ 25 ಯಾರಿಗೆ ಹೋಯಿತು ಎಂದರೆ ಅದನ್ನು ಮಾರಾಟ ಮಾಡಿರುತ್ತೇವೆ. ಮನೆತನದ ಅಡಚಣೆ ಸಲುವಾಗಿ ಮಾರಾಟ ಮಾಡಿರುತ್ತೇವೆ.

ಸರ್ವೆ ನಂ. 23, 24,25 ಎಲ್ಲವನ್ನು ಮಾರಾಟ ಮಾಡಿದ್ದೀರಿ ಎಂದರೆ ಸರಿ. ಪ್ರಸ್ತುತ ದಾವೆಯನ್ನು 2014 ರಲ್ಲಿ ಹೂಡಿರುತ್ತೀರಿ ಎಂದರೆ ಸರಿ. ಈ ದಾವೆಯನ್ನು ಹೂಡುವ ವೇಳೆಯಲ್ಲಿ ನಿಮ್ಮ ತಂದೆಯವರು ಜೀವಂತ ಇದ್ದರಾ ಎಂದರೆ ಇದ್ದರು. ನಿಮ್ಮ ತಂದೆಯವರನ್ನು ಈ ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರಿಗೆ ತಿಳುವಳಿಕೆ ಇರಲಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯನ್ನು ಏನು ಪರಿಹಾರ ಕೇಳಿ ಹೂಡಿದ್ದೀರಿ ಎಂದರೆ ಭಕ್ಷಿಶ ಪತ್ರಕ್ಕೆ ಸಂಬಂಧಪಟ್ಟಂತೆ ದಾವೆ ಮಾಡಿದ್ದೇವೆ. ಭಕ್ಷಿಶ ಪತ್ರ ಯಾವಾಗ ಆಯಿತು ಎಂದರೆ ದಿಃ 14-04-1966 ರಲ್ಲಿ ಆಗಿರುತ್ತದೆ. ಸದರಿ ಭಕ್ಷಿಶ ಪತ್ರಕ್ಕೆ ಸಂಬಂಧಪಟ್ಟಂತೆ ಯಾರು ನಿಮಗೆ ದಾನವನ್ನು ನೀಡಿದರೋ ಅವರೇ ತಕರಾರನ್ನು ನೀಡಿರುತ್ತಾರೆ ಎಂದರೆ ನೀಡಿರುವುದಿಲ್ಲ. ಅವರು ತಕರಾರು ನೀಡಿದ ಬಳಿಕ ತಹಶೀಲ್ದಾರ ನ್ಯಾಯಲಯದಲ್ಲಿ ಪ್ರಕರಣ ನಡೆಯಿತು ಎಂದರೆ ಸರಿ. ಆ ಪ್ರಕರಣದಲ್ಲಿ ತಕರಾರು ಸಲ್ಲಿಸಿದ್ದರಿಂದ ನಿಮ್ಮ ಹೆಸರುಗಳು ದಾಖಲು ಆಗಲಿಲ್ಲ ಎಂದರೆ ಸರಿ. ದಾವಾ ಜಮೀನು ಮತ್ತು ಇನ್ನೊಂದು ಜಮೀನಾದ ಅಂದರೆ 126 ಮತ್ತು 127 ಪಂಚಪ್ಪ ಹಾವಣಗಿ ರವರಿಗೆ ನಿಂಗಪ್ಪ ಹಾವಣಗಿ ರವರು ಭಕ್ಷಿಶ ಪತ್ರ ಆಗುವ ಪೂರ್ವದಲ್ಲೇ ವರದಿ ಮುಖಾಂತರ ನೀಡಿದ್ದರು ಎಂದರೆ ಸರಿಯಲ್ಲ. ಅದು ಮೋಸದಿಂದ ಆಗಿರುತ್ತದೆ. ಮೋಸದಿಂದ ಆಗಿದೆ ಎಂದು ಯಾವುದಾದರೂ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದೀರಾ ಎಂದರೆ 2012 ರಲ್ಲಿ ಮಾಡಿದ್ದೇವೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.